## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**ಹೆಚ್ಐವಿ/ಏಡ್ಸ್ ಸೋಂಕಿತ ಮಕ್ಕಳು ಹಾಗೂ ಈ ಖಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ ವಿಶೇಷ ಪಾಲನಾ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸುವ ಕುರಿತು ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಮಮಇ84 ಮಭಾಬ 2009, ದಿನಾಂಕ: 29.03.2010.

2. ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪತ್ರ ಸಂಖ್ಯೆ: ಮಮಅ:ಪಿಡಿಎಂ: ಹೆಚ್.ಐ.ವಿ-ಮಾರ್ಗಸೂಚಿ:11-12, ದಿನಾಂಕ:18.01.2012 ಮತ್ತು ಪತ್ರ ಸಂಖ್ಯೆ:ಮಮಅಇ: ಐಸಿಪಿಎಸ್:50:09-10, ದಿನಾಂಕ:04/11/2009

**ಪ್ರಸ್ತಾವನೆ**

2009-10ನೇ ಸಾಲಿನ ಆಯವ್ಯಯ ಭಾಷಣದಲ್ಲಿ H.I.V (Human Immune Deficiency Virus) ಸೋಂಕಿನ ಪ್ರಕರಣಗಳಲ್ಲಿ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆ ಹಾಗೂ ಹೆಚ್ಐವಿ ಸೋಂಕಿತ ಮಕ್ಕಳ ಪಾಲನೆ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ವಿಶೇಷ ಅನಾಥಾಲಯಗಳನ್ನು ಸ್ಥಾಪಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ್ದ ಹಿನ್ನಲೆಯಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಹೆಚ್.ಐ.ವಿ/ಏಡ್ಸ್ ಸೋಂಕಿತ ಮಕ್ಕಳ ಹಾಗೂ ಇಂತಹ ಕಾಯಿಲೆಯಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಡಿ ಲಭ್ಯವಿರುವ ಸೌಕರ್ಯಗಳೊಂದಿಗೆ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಾರಿಗೆ ಇಲಾಖೆ, ವಸತಿ ಇಲಾಖೆ ಮತ್ತು ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್ ಇವರ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಮಂಜೂರಾತಿ ನೀಡಲಾಗಿತ್ತು. ಯೋಜನೆಗೆ ಸಂಬಂಧಿಸಿದಂತೆ ಕೆಲವು ಮಾರ್ಗಸೂಚಿಗಳನ್ನು ಹಾಗೂ ಕೆಲವು ಷರತ್ತಿಗಳನ್ನು ವಿಧಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ 01.06.2012 ರ ಪತ್ರದಲ್ಲಿ ದಿನಾಂಕ: 29.03.2010 ರಂದು ಹೊರಡಿಸಲಾದ ಆದೇಶದನ್ವಯ ಹೆಚ್.ಐ.ವಿ. ಸೋಂಕಿತ ಮತ್ತು ಬಾಧಿತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿ ನೀಡಲಾಗಿತ್ತು. ಅದರಂತೆ 2010-11 ಹಾಗೂ 11-12ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿರುತ್ತದೆ. ಕಳೆದ ಎರಡು ವರ್ಷದಲ್ಲಿ ಆರೋಗ್ಯ ಇಲಾಖೆಯಿಂದ ಕೆಲವು ಮಾರ್ಗಸೂಚಿಗಳು ಹೊರಬಂದಿದ್ದು, ವಿಶೇಷ ಪಾಲನಾ ಯೋಜನೆಯಡಿ ಮಕ್ಕಳಿಗೆ ಎ.ಆರ್.ಟಿ. ಕೇಂದ್ರಕ್ಕೆ ಹೋಗಿ ಬರಲು ಪ್ರಯಾಣ ವೆಚ್ಚ ಹಾಗೂ ಹೆಚ್ಚುವರಿ ವೈದ್ಯಕೀಯ ವೆಚ್ಚವನ್ನು ಭರಿಸಲಾಗುತ್ತಿತ್ತು. ಹಾಲಿ ಆರೋಗ್ಯ ಇಲಾಖೆಯು ಮೇಲಿನ ಎರಡೂ ವೆಚ್ಚಗಳನ್ನು ತಮ್ಮ ಇಲಾಖೆಯ ಮೂಲಕ ಭರಿಸಲು ಆದೇಶ ಹೊರಡಿಸುವ ಹಿನ್ನಲೆಯಲ್ಲಿ ಈ ವೆಚ್ಚವನ್ನು ವಿಶೇಷ ಪಾಲನಾ ಯೋಜನೆಯಡಿ ಮಕ್ಕಳಿಗೆ ಒದಗಿಸುವುದನ್ನು ಕೈಬಿಡಬೇಕಾಗಿದ್ದು, ಅದಕ್ಕೆ ಅನುರೂಪವಾಗಿ ವಿಶೇಷ ಪಾಲನಾ ಯೋಜನೆಯ ಮಾರ್ಗಸೂಚಿಯಲ್ಲಿ ಬದಲಾವಣೆ ತರಬೇಕಾಗಿರುತ್ತದೆ ಹಾಗೂ ಹೆಚ್.ಐ.ವಿ. ಸೋಂಕಿತ/ಭಾದಿತ ಮಕ್ಕಳು ರಕ್ಷಣೆ ಮತ್ತು ಪೋಷಣೆಗೆ ಅವಶ್ಯವಿರುವ ಮಕ್ಕಳೆಂದು ಬಾಲನ್ಯಾಯ ಕಾಯ್ದೆಯಡಿ ಗುರುತಿಸಲಾಗಿದ್ದು, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಈ ಮಕ್ಕಳಿಗೆ ಸಹಾಯ ಒದಗಿಸಲು ಅವಕಾಶವಿದೆ ಎಂದು, ಈ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಮೂಲಕ ಅನುಷ್ಠಾನಗೊಳಿಸುತ್ತಿರುವುದರಿಂದ ಈ ವಿಶೇಷ ಪಾಲನಾ ಯೋಜನೆಯನ್ನು ಸೊಸೈಟಿ ಮೂಲಕ ಅನುಷ್ಠಾನಗೊಳಿಸಿದಲ್ಲಿ ಸೂಕ್ತವಾಗುತ್ತದೆ ಎಂದು ಪ್ರಸ್ತಾಪಿಸಿರುತ್ತಾರೆ.

ಈ ಕಾರ್ಯಕ್ರಮಗಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ಅನುಷ್ಠಾನಗೊಳಿಸಿದಲ್ಲಿ, ಕುಟುಂಬಗಳ ಗೌಪ್ಯತೆ ಕಾಪಾಡುವಲ್ಲಿ ಹಾಗೂ ಕಡಿಮೆ ಹಂತದ ಮೇಲ್ವಿಚಾರಣೆಯು ಸಹಾಯಕವಾಗುತ್ತದೆ ಎಂದು ತಿಳಿಸಿ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಹೆಚ್ಚಿನ ಹೊರೆಯನ್ನು ತಪ್ಪಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಅನುಷ್ಠಾನಗೊಳಿಸುವುದು ಸೂಕ್ತವಾಗಿದೆ ಎಂದು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಅಭಿಪ್ರಾಯ ನೀಡಿರುತ್ತಾರೆ.

ಈ ಬಗ್ಗೆ ದಿನಾಂಕ: 23.03.2012 ರಂದು ಪ್ರಧಾನ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ: 29.03.2010 ರ ಆದೇಶದಲ್ಲಿನ ಯೋಜನೆಯ ಮಾರ್ಗಸೂಚಿಗಳನ್ನು ಮಾರ್ಪಡಿಸುವಂತೆ ಸೂಚಿಸಿದ ಹಿನ್ನಲೆಯಲ್ಲಿ, ಪರಿಷ್ಕೃತ ಮಾರ್ಗಸೂಚಿಗಳನ್ನು ತಯಾರಿಸಿ, ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸಲ್ಲಿಸಿರುತ್ತಾರೆ.

**ಆದೇಶ ಸಂಖ್ಯೆ : ಮಮಇ 03 ಮಭಾಬ 2012, ಬೆಂಗಳೂರು ದಿನಾಂಕ : 20.07.2012**

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಆದೇಶ ಸಂಖ್ಯೆ: ಮಮಇ 84 ಮಭಾಬ 2009, ದಿನಾಂಕ: 29.03.2010 ನ್ನು ಹಿಂಪಡೆದು ಈ ಕೆಳಕಂಡಂತೆ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.

ಹೆಚ್.ಐ.ವಿ/ಏಡ್ಸ್ ಸೋಂಕಿತ/ಭಾದಿತ ಮಕ್ಕಳ ಹಾಗೂ ಏಡ್ಸ್ ನಿಂದ ಪಾಲಕರನ್ನು ಕಳೆದುಕೊಂಡ ಮಕ್ಕಳ ಪಾಲನೆಯ ನಿಮಿತ್ತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದ ಮಾರ್ಗ ಸೂಚಿಯನ್ವಯ ಹಾಗೂ ಕೆಲವು ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಮೂಲಕ ಅನುಷ್ಠಾನಗೊಳಿಸಲು ಸದಸ್ಯ ಕಾರ್ಯದರ್ಶಿಗಳು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರಿಗೆ ಮಂಜೂರಾತಿ ನೀಡಲಾಗಿದೆ.

Digitally Signed by :VIJAYALAKSHMI .

ಇದಕ್ಕೆ ಸಂಭವಿಸುವ ವೆಚ್ಚವನ್ನು ಮಕ್ಕಳಿಗಾಗಿ ವಿಶೇಷ ಪಾಲನಾ ಕೇಂದ್ರ (ಯೋಜನೆ) ಲೆಕ್ಕಶೀರ್ಷಿಕೆ 2235-02-102-0-33-101 ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 141 ವೆಚ್ಚ-3/2010, ದಿನಾಂಕ: 20.03.2010 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

( ವಿಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

ಪ್ರತಿಗಳು:

1) ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ/ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ/ಶಿಕ್ಷಣ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ/ಸಾರಿಗೆ ಇಲಾಖೆ/ವಸತಿ ಇಲಾಖೆ.
4) ಯೋಜನಾ ನಿರ್ದೇಶಕರು, ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು.
5) ದೇಶೀಯ ನಿರ್ದೇಶಕರು, ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್, ಬೆಂಗಳೂರು.
6) ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ.
7) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8) ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
9) ಎಲ್ಲಾ ಜಿಲ್ಲಾ ಉಪನಿರ್ದೇಶಕರು/ಸಹಾಯಕ ನಿರ್ದೇಶಕರು/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಮಾಹಿತಿಗಾಗಿ:

ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು.

(ಕಂಡಿಕೆ 7 ಮತ್ತು 11 ರಿಂದ 12 ರವರೆಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರ ಮುಖಾಂತರ ಹೊರಡಿಸುವುದು.)

## ಅನುಬಂಧ

**(ಸರ್ಕಾರಿ ಆದೇಶ ಸಂಖ್ಯೆ: ಮಮಇ 03 ಮಭಾಬ 2012, ದಿನಾಂಕ:20.07.2012)**

**ಏಡ್ಸ್ ನಿಂದಾಗಿ ಪಾಲಕರನ್ನು ಕಳೆದುಕೊಂಡ ಅನಾಥ ಹಾಗೂ ಹೆಚ್ಐವಿ ಸೋಂಕಿತ / ಭಾದಿತ ಸಂಕಷ್ಟದಲ್ಲಿರುವ ಮಕ್ಕಳ ಪಾಲನೆಗೆ ಬೆಂಬಲ ಒದಗಿಸುವ ವಿಶೇಷ ಯೋಜನೆಗೆ ಅನುಷ್ಠಾನ ಮಾರ್ಗಸೂಚಿ:**

**I. ಈ ಯೋಜನೆಯನ್ನು ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆ ಎಂದು ಕರೆಯತಕ್ಕದ್ದು.**

**ಯೋಜನೆಯಡಿ ಒದಗಿಸುವ ಸೌಲಭ್ಯಗಳು:**

ಪ್ರತಿ ಮಗುವಿನ ಅವಶ್ಯಕತೆಯನ್ನು ಪರಿಗಣನೆಗೆ ತೆಗೆದುಕೊಂಡು, ಮಕ್ಕಳಿಗಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಂಡ ನಂತರವೂ ಮಕ್ಕಳ ರಕ್ಷಣೆ ಮತ್ತು ಭದ್ರತೆ, ಪೌಷ್ಠಿಕ ಆಹಾರ, ಶಿಕ್ಷಣ ಹಾಗೂ ಪ್ರಾಸಂಗಿಕ ವೆಚ್ಚಗಳಡಿ ಕಂಡುಬಂದ ಈ ಕೆಳಗೆ ಸೂಚಿಸಿದ ಅತಿ ಮುಖ್ಯವಾದ ಕೊರತೆಗಳನ್ನು ಪರಿಶೀಲಿಸಲಾಗಿದೆ.

0 ಯಿಂದ 18 ವರ್ಷದ ವರೆಗಿನ ಅನಾಥ ಹಾಗೂ ಸಂಕಷ್ಟದಲ್ಲಿರುವ ಮಕ್ಕಳಿಗೆ ಒದಗಿಸುವ ಸೌಲಭ್ಯಗಳು.

Digitally Signed by : VIJAYALAKSHMI .

**ಸಾಂಸ್ಥಿಕ ಸೇವೆ:** ಮಕ್ಕಳನ್ನು ಆರೈಕೆ ಮಾಡಲು ಯಾವುದೇ ಕೌಟುಂಬಿಕ ವ್ಯವಸ್ಥೆ ಇಲ್ಲದ ಸಂದರ್ಭದಲ್ಲಿ ಸಾಂಸ್ಥಿಕ ಸೇವೆ ಒದಗಿಸುವುದು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಮಂದಿರ, ಬಾಲಮಂದಿರಗಳಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ಇಲಾಖೆಯಿಂದ ಸ್ವಯಂ ಸೇವಾ ಸಂಸ್ಥೆಗಳು ಮೂಲಕ ನಡೆಸುತ್ತಿರುವ ಅರ್ಹ ಸಂಸ್ಥೆ. ದತ್ತು ಸಂಸ್ಥೆ, ನಿರ್ಗತಿಕ ಮಕ್ಕಳ ಕುಟೀರ, ಅನಾಥಾಲಯ ಹಾಗೂ ಬಾಲಕಿಯರ ವಸತಿ ನಿಲಯಗಳಲ್ಲಿ ಮತ್ತು ಸರ್ವ ಶಿಕ್ಷಣ ಅಭಿಯಾನದಡಿ ನಡೆಯುವ ಆಶಾಕಿರಣ ಶಾಲೆಗಳಲ್ಲಿ ದಾಖಲೆ ಮಾಡುವುದು.

**ಅಸಾಂಸ್ಥಿಕ ಸೇವೆ:** 0 ಯಿಂದ 18 ವರ್ಷದ ಮಕ್ಕಳಿಗೆ ಕೌಟುಂಬಿಕ ಸೇವೆ ಒದಗಿಸುವ ಅವಕಾಶಗಳಿದ್ದಲ್ಲಿ ಅಸಾಂಸ್ಥಿಕ ಸೇವೆ ಒದಗಿಸುವುದು ಹಾಗೂ ಪ್ರತಿ ಮಗುವಿನ ಅವಶ್ಯಕತೆ (Need based) ಆಧರಿಸಿ ಜಿಲ್ಲಾ ಮಕ್ಕಳ ರಕ್ಷಣಾ ಟಕವು ಸಿದ್ಧಪಡಿಸಿದ ಪ್ರಸ್ತಾವನೆಯನ್ನು ಸದಸ್ಯ ಕಾರ್ಯದರ್ಶಿಗಳು, ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರಿಗೆ ಸಲ್ಲಿಸಿ ಮಂಜೂರಾತಿ ಪಡೆಯುವುದು.

**1) ಈ ಯೋಜನೆಯ ಸೌಲಭ್ಯಗಳು ಈ ಕೆಳಗೆ ಸೂಚಿಸಿದವರಿಗೆ ಅನ್ವಯಿಸುತ್ತದೆ.**

- ಅನಾಥರು : ಏಡ್ಸ್ ನಿಂದ ಮರಣ ಹೊಂದಿದ ತಂದೆ ತಾಯಿಯರ 0-18 ವರ್ಷದ ಮಕ್ಕಳು
- ಹೆಚ್.ಐ.ವಿಗೆ ತೆರೆದವರು (Exposed): ಹೆಚ್‌ಐವಿ + ಮಹಿಳೆಗೆ ಹುಟ್ಟಿದ ಮಗು, 18 ತಿಂಗಳವರೆಗೆ ಮಗುವಿಗೆ ಸ್ಥಿತಿ ಬಗ್ಗೆ ಗೊತ್ತಾಗದೇ ಇರುವುದು.
- ಹೆಚ್.ಐ.ವಿ ಸೋಂಕಿತರು (infected) ಹೆಚ್.ಐ.ವಿ + ಎಂದು ಗುರುತಿಸಿರುವ ಮಕ್ಕಳು.
- ಹೆಚ್‌ಐವಿ ಭಾಧಿತರು (affected) ಹೆಚ್.ಐ.ವಿ ಸೋಂಕಿತ ತಂದೆ ತಾಯಿಯ ಕುಟುಂಬದ ಮಕ್ಕಳು.

**II. ಸೌಲಭ್ಯಗಳು:**

ಪ್ರತಿ ಫಲಾನುಭವಿಯ ರಕ್ಷಣೆ ಮತ್ತು ಪೋಷಣೆಗಾಗಿ ಮಾಸಿಕ ಗರಿಷ್ಠ ರೂ.800/- (ರೂಪಾಯಿ ಎಂಟು ನೂರು ಮಾತ್ರ) ವೆಚ್ಚವನ್ನು ಭರಿಸತಕ್ಕದ್ದು.

ಅ) ಈ ಮೇಲೆ ಸೂಚಿಸಿದ ಇಲಾಖೆ ಸಂಸ್ಥೆಗಳು ಹಾಗೂ ಅನುದಾನ ಪಡೆದು ನಡೆಸುತ್ತಿರುವ ಅರ್ಹ ಸಂಸ್ಥೆ, ದತ್ತು ಸಂಸ್ಥೆ, ನಿರ್ಗತಿಕ ಮಕ್ಕಳ ಕುಟೀರ, ಅನಾಥಾಲಯಗಳು ಮತ್ತು ಸರ್ವ ಶಿಕ್ಷಣ ಅಭಿಯಾನದಡಿ ನಡೆಯುವ ಆಶಾಕಿರಣ ಸಂಸ್ಥೆಗಳಿಗೆ ಇಲಾಖೆ ಒದಗಿಸುವ ಸೌಲಭ್ಯಗಳನ್ನು ಹೊರತುಪಡಿಸಿ ಅವಶ್ಯವಿರುವ ಉಳಿದ ಸೌಕರ್ಯಗಳಿಗೆ ಅನುದಾನ ಒದಗಿಸಬೇಕಾಗುತ್ತದೆ.

ಆ)**ಅಸಾಂಸ್ಥಿಕ ಸೇವೆ**:ಇಲಾಖೆ ಹಾಗೂ ಸ್ವಯಂಸೇವಾ ಸಂಸ್ಥೆ ಸಹಯೋಗದೊಂದಿಗೆ ಫಾಸ್ಟರ್‌ಕೇರ್ ಅಥವಾ ಪ್ರಾಯೋಜಕತ್ವಕ್ಕೆ ಅನುದಾನವನ್ನು ಒದಗಿಸಬೇಕಾಗುತ್ತದೆ.

**3) ಅನುಷ್ಠಾನ:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಐ.ಸಿ.ಟಿ.ಸಿ (Integrated councelling and testing center) ಹಾಗೂ ಎ.ಆರ್.ಟಿ.(Anti Retro Viral Therapy) ಕೇಂದ್ರಗಳಲ್ಲಿ ನೊಂದಣಿ ಆದ ಕುಟುಂಬಗಳ ಸಮೀಕ್ಷೆ ನಡೆಸಿ ಪ್ರತೀ ಕುಟುಂಬದ ಅವಶ್ಯಕತೆಗಳನ್ನು ಗುರುತಿಸಿ ಸರ್ಕಾರದ ವಿವಿಧ ಯೋಜನೆಯಡಿ **ಇರುವ ಸೌಕರ್ಯಗಳನ್ನು ಹೊರತುಪಡಿಸಿ ಒದಗಿಸಬೇಕಾದ ಸಹಾಯಧನದ ಪ್ರಸ್ತಾವನೆಯನ್ನು ಸಿದ್ಧಪಡಿಸುವ ಜವಾಬ್ದಾರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಹೊಂದಿರುತ್ತದೆ.**

**ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ವಯ ರಚಿಸಿರುವ ತಾಲ್ಲೂಕು ಹಾಗೂ ಗ್ರಾಮ ಮಕ್ಕಳ ರಕ್ಷಣಾ ಸಮಿತಿ ಹಾಗೂ ಬಾಲ ನ್ಯಾಯ ಕಾಯ್ದೆಯಡಿ ಸ್ಥಾಪಿಸಿರುವ ಮಕ್ಕಳ ಕಲ್ಯಾಣ ಸಮಿತಿಗಳು ಸಹಕರಿಸುತ್ತವೆ.**

**III. ಆರ್ಥಿಕ ಸಹಾಯ:**

| | |
|---|---|
| **ಅಸಾಂಸ್ಥಿಕ ಸೇವೆ** | |
| ಫಾಸ್ಟರ್ ಕೇರ್ ಮತ್ತು ಪ್ರಾಯೋಜಕತ್ವ | ಫಾಸ್ಟರ್ ಕೇರ್ ಮತ್ತು ಪ್ರಾಯೋಜಕತ್ವ ಸೇವೆಯನ್ನು ಮಗುವಿಗೆ ಒದಗಿಸಿದಲ್ಲಿ ಕ್ರಮವಾಗಿ ತಿಂಗಳಿಗೆ ರೂ.750 ಹಾಗೂ ರೂ.650/- ಗಳನ್ನು ಮಗುವಿನ ಪೋಷಣೆಗಾಗಿ ಒದಗಿಸುವುದು. ಮಗುವಿನ ಆರೋಗ್ಯ ತಪಾಸಣೆ ನಿಯಮಿತವಾಗಿ ಮಾಡಿಸುತ್ತಿರುವುದು ಹಾಗೂ ಶಾಲೆಗೆ ದಾಖಲಾಗುವ ವಯಸ್ಸಿನ ಮಗು ಶಿಕ್ಷಣದ ಮುಖ್ಯವಾಹಿನಿಯಲ್ಲಿ ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಹಾಗೂ ಇವುಗಳನ್ನು ಮಗುವಿನ ಕೇಸ್ ಕಡತದಲ್ಲಿ ಕ್ರಮಬದ್ಧವಾಗಿ ದಾಖಲಿಸುವುದು. |
| ಪ್ರಾಸಂಗಿಕ ವೆಚ್ಚ<br>1. ಶಿಕ್ಷಣಕ್ಕೆ ಪೂರಕವಾದ<br>2.ಪರಿಕರಗಳು | Actuals ಅಥವಾ ವರ್ಷಕ್ಕೆ ರೂ 500/- ಯಾವುದು ಕಡಿಮೆಯೋ ಅದು |

- ಒಟ್ಟಾರೆ ಮಗುವಿಗೆ ನೀಡುವ ವಾರ್ಷಿಕ ಧನಸಹಾಯದ ಒಟ್ಟು ಮೊತ್ತ ರೂ.9600/- ಮೀರಬಾರದು.
- ಫಾಸ್ಟರ್ ಕೇರ್ ಹಾಗೂ ಪ್ರಾಯೋಜಕತ್ವಕ್ಕಾಗಿ ನಿಗದಿಪಡಿಸುವ ಮೊತ್ತ ವಾಸ್ತವವಾಗಿರತಕ್ಕದ್ದು.

**IV. ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಅನುದಾನದ ಬಿಡುಗಡೆ:**

**ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪ್ರತಿ ವರ್ಷ ನವೀಕರಣಕ್ಕಾಗಿ ಹಾಗೂ ಹೊಸದಾಗಿ ಗುರುತಿಸಿದ ಕುಟುಂಬಗಳ ಸಮೀಕ್ಷೆ ನಡೆಸಿ,**

**ಅವಶ್ಯಕತೆಗಳನ್ನು ಗುರುತಿಸಿ, ಬೇಡಿಕೆಯನ್ನು ಸಿದ್ಧಪಡಿಸಿ ಆರ್ಥಿಕ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸೊಸೈಟಿಗೆ ಸಲ್ಲಿಸುತ್ತದೆ.**

- ತಾಲ್ಲೂಕು ಹಾಗೂ ಗ್ರಾಮ ಸಮಿತಿಗಳು ಅನುದಾನದ ಸದ್ಬಳಕೆ ಬಗ್ಗೆ ಪರಿಶೀಲಿಸುತ್ತದೆ.
- ಮಕ್ಕಳ ಕಲ್ಯಾಣ ಸಮಿತಿಯೂ ಅನುದಾನದ ಬಳಕೆ ಬಗ್ಗೆ ಮೇಲ್ವಿಚಾರಣೆ ಮಾಡುತ್ತದೆ.
- ಸೊಸೈಟಿಯು ಪರಿಶೀಲಿಸಿ ಅನುಮೋದಿತ ಕ್ರಿಯಾ ಯೋಜನೆಯೊಂದಿಗೆ ಅನುದಾನವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಬಿಡುಗಡೆ ಮಾಡುತ್ತದೆ.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅನುದಾನಕ್ಕೆ ಸೂಕ್ತ ದಾಖಲೆಗಳನ್ನು ನಿರ್ವಹಿಸಿ ಅನುದಾನವನ್ನು ಕುಟುಂಬಗಳಿಗೆ ಬಿಡುಗಡೆ ಮಾಡುತ್ತದೆ

**ಸಮೀಕ್ಷೆ :** ICTC/ ART* ಕೇಂದ್ರಗಳಲ್ಲಿ ನೋಂದಣಿಯಾದ ಕುಟುಂಬಗಳ ಸಮೀಕ್ಷೆಯನ್ನು ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್ ಇವರ ಮಾರ್ಗದರ್ಶನದಲ್ಲಿ ನಡೆಸಲಾಗುವುದು. ಸಮೀಕ್ಷೆ ನಡೆಸಲು ಹಾಗೂ ಅವಶ್ಯಕತೆಗಳನ್ನು ಗುರುತಿಸಲು ಅವಶ್ಯವಾದ ಸರ್ವೆ ನಮೂನೆಯನ್ನು ಒದಗಿಸುತ್ತದೆ. ಸಮೀಕ್ಷೆಯನ್ನು ಲಿಂಕ್ ವರ್ಕರ್ಸ್, ಆರೋಗ್ಯ ಸಹಾಯಕಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುವುದು. ಸಮೀಕ್ಷೆಗಾಗಿ ಅನುದಾನ ನಿಗದಿಪಡಿಸುವುದು.

**ತರಬೇತಿ ಹಾಗೂ ಐಇಸಿ:** ಯೋಜನೆಯ ಅನುಷ್ಠಾನದ ಭಾಗವಾಗಿರುವ ಎಲ್ಲರಿಗೂ ಸಮೀಕ್ಷೆ ನಡೆಸಲು, ಸಮೀಕ್ಷಾ ವರದಿಯ ಆಧಾರದ ಮೇಲೆ ಪ್ರಸ್ತಾವನೆ ಸಿದ್ಧಪಡಿಸಲು ತರಬೇತಿ ನೀಡುವುದು. ತರಬೇತಿಗಾಗಿ ಅನುದಾನ ನಿಗಧಿಪಡಿಸುವುದು ಹಾಗೂ ಕಾರ್ಯಕ್ರಮ ಬಗ್ಗೆ ಅರಿವು ಮೂಡಿಸಲು ಅಗತ್ಯವಾದ ಐ.ಇ.ಸಿ ಮೆಟೀರಿಯಲ್ಸ್ ಸಿದ್ಧಪಡಿಸಲು ಅನುದಾನ ನಿಗದಿಮಾಡುವುದು.

**ಆಡಳಿತ ವೆಚ್ಚ:** ಯೋಜನೆಯ ಅನುಷ್ಠಾನಕ್ಕೆ ಪೂರಕವಾಗಿ ದಾಖಲೀಕರಣದ ಅವಶ್ಯವಿದ್ದು, ಇದಕ್ಕಾಗಿ ಆಡಳಿತ ವೆಚ್ಚ ಒದಗಿಸುವ ಅವಶ್ಯವಿದ್ದು ಈ ಕೆಳಗಿನಂತೆ ಒದಗಿಸಿದೆ.

1. 100 ಕ್ಕಿಂತ ಕಡಿಮೆ ಮಕ್ಕಳು ಇರುವ ತಾಲ್ಲೂಕಿಗೆ ವರ್ಷಕ್ಕೆ ರೂ.12000/-
2. 100 ರಿಂದ 250 ಮಕ್ಕಳು ಇರುವ ತಾಲ್ಲೂಕಿಗೆ ವರ್ಷಕ್ಕೆ ರೂ.18000/-
3. 250 ರಿಂದ 400 ಮಕ್ಕಳಿರುವ ತಾಲ್ಲೂಕಿಗೆ ವರ್ಷಕ್ಕೆ ರೂ.24000/-
4. 400 ಕ್ಕಿಂತ ಹೆಚ್ಚು ಮಕ್ಕಳು ಇರುವ ತಾಲ್ಲೂಕಿಗೆ ವರ್ಷಕ್ಕೆ ರೂ.30000/-

**ಯೋಜನೆಯ ಅನುಷ್ಠಾನದಲ್ಲಿ ಸಹಕರಿಸುವವರು:** ಯೋಜನೆಯ ಅನುಷ್ಠಾನದಲ್ಲಿ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸಾರಿಗೆ ಇಲಾಖೆ, ವಸತಿ ಇಲಾಖೆ ಮತ್ತು ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್ ಗಳು ಸಹಕಾರ ಒದಗಿಸುತ್ತವೆ.

**ಆರೋಗ್ಯ ಇಲಾಖೆ:** ಸಮೀಕ್ಷೆ ಆಧರಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಲ್ಲಿ ನೆರವಾಗುತ್ತದೆ. ಜಿಲ್ಲಾ ಏಡ್ಸ್ ಪ್ರಿವೆನ್ಷನ್ ಘಟಕಗಳು ಸೌಲಭ್ಯಕ್ಕೆ ಅರ್ಹ ಇರುವ ಕುಟುಂಬಗಳ ಮಾಹಿತಿಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಒದಗಿಸುತ್ತದೆ.

**ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ:** ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುವುದು, ತರಬೇತಿ ನೀಡುವುದು, ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊಂದಿರುತ್ತದೆ.

**ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್:** ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುವುದು, ತರಬೇತಿ ನೀಡುವುದು, ಮಾರ್ಗದರ್ಶನ ಮಾಡುವ ಜವಾಬ್ದಾರಿ ಹೊಂದಿರುತ್ತದೆ.

**ಶಿಕ್ಷಣ ಇಲಾಖೆ:** ಮಕ್ಕಳನ್ನು ಆದ್ಯತೆ ಮೇಲೆ ಅವಕಾಶವಿರುವ ಕಡೆ ಆಶಾಕಿರಣ ಶಾಲೆಗೆ ದಾಖಲೆ ಮಾಡಿಕೊಳ್ಳುವುದು. ಸಮೀಕ್ಷೆ ವರದಿ ಮೇಲೆ ಸಿದ್ಧಪಡಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲು ಇಲಾಖೆಯ ಕ್ಲಸ್ಟರ್ ಅಧಿಕಾರಿಗಳನ್ನು ನಿಯೋಜಿಸುವುದು.

**ಪರಿಶಿಷ್ಠ ಜಾತಿ ಹಾಗೂ ವರ್ಗಗಳ ಇಲಾಖೆ:** ಮಕ್ಕಳನ್ನು ಆದ್ಯತೆ ಮೇಲೆ ಅವಕಾಶವಿರುವ ಕಡೆ ವಸತಿ ನಿಲಯಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆ ಮೂಲಕ ನಡೆಯುವ ಅನಾಥಾಲಯಗಳಿಗೆ ದಾಖಲೆ ಮಾಡಿಕೊಳ್ಳುವುದು.

**ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆ :** ಮಕ್ಕಳನ್ನು ಆದ್ಯತೆ ಮೇಲೆ ಅವಕಾಶವಿರುವ ಕಡೆ ವಸತಿ ನಿಲಯಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆ ಮೂಲಕ ನಡೆಯುವ ಅನಾಥಾಲಯಗಳಿಗೆ ದಾಖಲೆ ಮಾಡಿಕೊಳ್ಳುವುದು.

**ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ :** ಗ್ರಾಮ ಪಂಚಾಯತಿಗಳು ಸಮೀಕ್ಷೆ ಆಧರಿಸಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಅನುದಾನ ಪಡೆದ ಕುಟುಂಬಗಳು ಆರೋಗ್ಯ ಸುಧಾರಣೆ ಬಗ್ಗೆ ಪರಿಶೀಲಿಸುವಲ್ಲಿ ಸಹಕರಿಸುತ್ತದೆ.

ಮೇಲಿನ ಎಲ್ಲಾ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ/ಗ್ರಾಮ ಹಂತಗಳಲ್ಲಿ ಸಂಬಂದಿಸಿದ ಅಧಿಕಾರಿಗಳು ಯೋಜನೆಯ ಅನುಷ್ಠಾನದಲ್ಲಿ ನೆರವಾಗುತ್ತಾರೆ.

(ವಿಜಯಲಕ್ಷ್ಮಿ)

ಸರ್ಕಾರದ ಅಧೀನ ಕಾರ್ಯದರ್ಶಿ-1,

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ

Digitally Signed by :VIJAYALAKSHMI .